ದಿನಾಂಕ 03-02-2020 ಅಸಲು ದಾವಾ ಸಂ.130/2011

ಡಿ.ಡಬ್ಲ್ಯೂ.-1

ಸಾಕ್ಷಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :</u> ವಾದಿ ಪರ ಶ್ರೀ.ಎಸ್ ಎ ಎಸ್ ವಕೀಲರಿಂದ

ನಾನು ದಾವಾ ಆಸ್ತಿಯನ್ನು ನೋಡಿರುವುದಿಲ್ಲ. ಈ ದಾವೆ ಸರ್ವೆ ನಂ.45 ರ ಕುರಿತಾಗಿ ಇದೆ. ಅದು ಸಸಾಲಟ್ಟಿ ಗ್ರಾಮದಲ್ಲಿದೆ. ಅದರ ಕ್ಷೇತ್ರ ಮತ್ತು ಚಕಬಂದಿ ಗೊತ್ತಿಲ್ಲ . ಸದರಿ ಆಸ್ತಿಯ ಬಗ್ಗೆ ಕಂದಾಯ ದಾಖಲಾತಿಗಳನ್ನು ತೆಗೆದು ನಾನು ನೋಡಿರುವುದಿಲ್ಲ. ಈ ದಾವೆಗೆ ಸಲ್ಲಿಸಿದ ತಕರಾರಿಗೆ ಮಾಹಿತಿಯನ್ನು ರಾವಳ ಮತ್ತು ರಂಗಪ್ಪಗೋಳ ಇವರು ಕೊಟ್ಟಿರುತ್ತಾರೆ. ಅವರು ಕೊಟ್ಟ ಮಾಹಿತಿಯನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಾನು ಯಾವ ಆಧಾರದ ಮೇಲೆ ಮಾಹಿತಿ ನೀಡಿರುತ್ತೇನೆಂದು ಗೊತ್ತಿಲ್ಲ. ಈ ದಾವೆಯ ಬಗ್ಗೆ ಓದಿ ತಿಳಿದುಕೊಂಡಿರುತ್ತೇನೆ. ವಸತಿ ಯೋಜನೆ ಬಗ್ಗೆ ದಾವೆ ಮಾಡಿರುತ್ತಾರೆ. ಈ ದಾವೆಯಲ್ಲಿ ವಾದಿ ಹಾಜರುಪಡಿಸಿದ ನಕಾಶೆಯನ್ನು ನಾನು ನೋಡಿರುವುದಿಲ್ಲ. ಅಪ್ಪಾಸಾಹೇಬ ಮೀರಾಸಾಹೇಬ ನದಾಫ ಇವರ ಪರಿಚಯವಿಲ್ಲ. ಅವರ ಮನೆ ಎಲ್ಲಿದೆ ಎಂದು ನಾನು ನೋಡಿರುವುದಿಲ್ಲ. ಸಾಕ್ಷಿಗೆ ಆಸ್ತಿ ನಂ.384 ರಲ್ಲಿ ಕಟ್ಟುತ್ತಿರುವ ಮನೆಯನ್ನು ಸ್ಥಗಿತಗೊಳಿಸುವ ಕುರಿತು ಅಪ್ಪಾಸಾಹೇಬ ನದಾಫ ಇವರಿಗೆ ಕೊಟ್ಟ ಪತ್ರವನ್ನು ತೋರಿಸಲಾಗಿ , ಅದನ್ನು ತಮ್ಮ ಕಾರ್ಯಾಲಯದಿಂದ ನೀಡಿರುವುದಾಗಿ ಸಾಕ್ಷಿ ಒಪ್ಪಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಈ ಸಾಕ್ಷಿ ಹೇಳುವುದಕ್ಕಿಂತ ಮೊದಲು ಸದರಿ ಆಸ್ತಿ ನಂ.384 ರ ಕುರಿತು ಚೌಕಾಶಿ ಮಾಡಿರುವುದಿಲ್ಲ. ಸಾಕ್ಷಿಗೆ ಕೋರ್ಟ ಕಮೀಷನರರವರು ನೀಡಿದ ನಕ್ಷೆಯನ್ನು ತೋರಿಸಲಾಗಿ, ಅದನ್ನು ನಾನು ಈ ಮೊದಲು ನೋಡಿರುವುದಿಲ್ಲ ಎಂದು ಸಾಕ್ಷಿ ತಿಳಿಸುತ್ತಾರೆ. ಸದರಿ ನಕ್ಷೆಯಲ್ಲಿ ಕ್ರಮ ಸಂಖ್ಯೆ ಕೆಂಪು ಬಣ್ಣದಿಂದ ತೋರಿಸಿದ ವರದಿ ಅಪ್ಪಾಸಾಹೇಬ ನದಾಫ ಇವರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಆಸ್ತಿ ನಂ.384 ಇದು ಸರ್ವೆ ನಂ.29/1 ರಲ್ಲಿ ಬರುತ್ತದೆ ಎಂದರೆ ಸರಿ. ಸದರಿ 29/1 NA ಆಗಿರುವುದಿಲ್ಲ. NA ಆಗಿರದ ಒಕ್ಕಲುತನದ ಭೂಮಿಗೆ ಪಂಚಾಯತ ನಂಬರ ಕೊಡಲು ಬರುವುದಿಲ್ಲ ಎಂದರೆ ಸರಿ. ಆಸ್ತಿ ನಂ.384 ಇದು ಪಂಚಾಯತ ಆಸ್ತಿ ನಂಬರ್ ಇರುತ್ತದೆಂದರೆ ಸರಿ. ನಮ್ಮ ಪಂಚಾಯತಿಯಿಂದ ಅಪ್ಪಾಸಾಹೇಬ ನದಾಫ ಇವರಿಗೆ NA ಆಗಿರದ ಒಕ್ಕಲುತನ ಭೂಮಿಗೆ 384 ಎಂದು

ಕಾನೂನುಬಾಹೀರವಾಗಿ ಪಂಚಾಯತಿ ನಂಬರ್ ಕೊಟ್ಟಿರುತ್ತೇವೆಂದರೆ ಸರಿಯಲ್ಲ. ಆಸ್ತಿ ನಂ.384 ನಿರ್ದಿಷ್ಟವಾಗಿ ಎಲ್ಲಿ ಬರುತ್ತದೆ ಎಂದು ನಾನು ದಾಖಲೆ ನೋಡಿಯೇ ಹೇಳುತ್ತೇನೆ.

ಮುಂದುವರೆದ ಪಾಟೀಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.